O.S.2/2017
P.W.3

**ಸಾಕ್ಷಿದಾರರನ್ನುಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 12-01-2018.**

ಪಾಟೀ ಸವಾಲು ಶ್ರೀ ಕೆ.ಜೆ.ಡಿ. ಪ್ರತಿವಾದಿ ಪರ **ವಕೀಲರಿಂದ ಃ**

ನಾನು ಪಿ.ಯು.ಸಿ ವರೆಗೆ ವ್ಯಾಸಾಂಗ ಮಾಡಿದ್ದೇವೆ. ನಾನು ಮತ್ತಿಗಟ್ಟ ಗ್ರಾಮ ಪಂಚಾಯಿತಿಯಲ್ಲಿ ಗ್ರಂಥಾಲಯ ಮೇಲ್ವಚಾರಕನಾಗಿದ್ದೇನೆ. ಚನ್ನರಾಯಪಟ್ಟಣದಿಂದ ನಮ್ಮ ಊರಿಗೆ 30 ಕಿ.ಮೀ ಅಂತರ ಇದೆ. 2007 ಇಸವಿಯಿಂದ 2015 ನೆ ಇಸವಿಯವರೆಗೆ ನಮ್ಮ ಕಛೇರಿಯ ಸಮಯ ಬೆಳಿಗ್ಗೆ ರಿಂದ 12 ಗಂಟೆಯವರೆಗೆ ಇತ್ತು. ಮದ್ಯಾಹ್ನ 3 ರಿಂದ 6 ಗಂಟೆಯವರೆಗೆ ಇತ್ತು.

2013 ರ ಡಿಸೆಂಬರ್ ತಿಂಗಳಲ್ಲಿ ವಾದಿ, ಪ್ರತಿವಾದಿ, ಶಿವಲಿಂಗೇಗೌಡ ಹಾಗೂ ನಾನು ಹಾಗೂ ವಾದಿಯ ಗಂಡ ಗ್ರಂಥಾಲಯದಲ್ಲಿ ಸೇರಿದ್ದೆವು. ಸಮಯ ನೆನಪಿಲ್ಲ. ಆಗ ಸಮಯ ಸುಮಾರು 11 ರಿಂದ 12 ಗಂಟೆಯವರೆಗ ಇರಬಹುದು. ಆ ದಿನ ಗ್ರಂಥಾಲಯದಿಂದ ಬಂದು ವಾದಿಯ ಮನೆಯ ಬಳಿ 50 ಸಾವಿರ ರೂಪಾಯಿಯನ್ನು ನೀಡಿರುತ್ತಾರೆ. ಆಗ ಮೇಲ್ಕಂಡ ಎಲ್ಲಾರೂ ಇದ್ದೆವು. ಆ ದಿನ 1000 ರೂಪಾಯಿಯ 30 ನೋಟು ಉಳಿಕೆ ನೋಟು ಎಷ್ಟು ರೂಪಾಯಿ ಮೊತ್ತದ್ದು ಎಂದು ಗೊತ್ತಿಲ್ಲ, ಕಾಗದವನ್ನು ಸುರೇಶ ಮತ್ತು ನೇತ್ರಾವತಿ ತಂದಿರುತ್ತಾರೆ. ಆಗ ನಾನು ಇದ್ದೆ. ಹಣವನ್ನು ವಾದಿ ನೀಡಿರುತ್ತಾರೆ. ದಿನಾಂಕಃ02.01.2014 ರಂದು 80 ಸಾವಿರ ರೂಪಾಯಿಗಳನ್ನು ನೀಡಿರುತ್ತಾರೆ. ಕಾಗದವನ್ನು 1 ರಿಂದ 2 ಗಂಟೆಯವರೆಗೆ ಬರೆಯಲಾಯಿತು. ಪತ್ರ ಬರೆಯಲು ಇಬ್ಬರೂ ಮಾಹಿತಿ ನೀಡಿರುತ್ತಾರೆ. ಸದರಿ ಪತ್ರದಲ್ಲಿ 2 ರೂಪಾಯಿ ಬಡ್ಡಿಯಂತೆ ವಾಪಸ್ಸು ನೀಡುವಂತೆ ಬರೆಯಲಾಯಿತು. ಆ ದಿನ ಸಾವಿರ ರೂಪಾಯಿ 50 ನೋಟು 500 ರೂಪಾಯಿ 50 ನೋಟು 100 ರೂಪಾಯಿ 50 ನೋಟುಗಳನ್ನು ನೀಡಿರುತ್ತಾರೆ, ಸದರಿ ಹಣವನ್ನು ಎಲ್ಲಿ ತಂದರು ಎಂದು ಗೊತ್ತಿಲ್ಲ. ವಾದಿಯ ಗಂಡ ಹಾಗೂ ನಾನು ಒಂದೇ ಊರಿನವರು ಎಂದರೆ ಸರಿ. ಪ್ರತಿವಾದಿ ವಾದಿಯಿಂದ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಂಡತಿ ನಮ್ಮ ಇಲಾಖೆಯಲ್ಲಿ ಇದ್ದಾರೆ ಎಂದರೆ ಸರಿ. ಪ್ರಸ್ತುತ 7000 ಸಾವಿರ ರೂಪಾಯಿ ಸಂಬಳ ಪಡೆಯುತ್ತಿದ್ದಾರೆ. ವಾದಿಯ ಗಂಡನಿಗೆ ಎಷ್ಟು ಸಂಬಳ ಬರುತ್ತದೆ ಎಂದು ಗೊತ್ತಿಲ್ಲ. ಪ್ರತಿವಾದಿಗೆ ನೀರಾವರಿ ಜಮೀನು, ಗದ್ದೆ ತೋಟ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಪ್ರತಿವಾದಿ ನಮ್ಮ ಊರಿನವರು. ಪ್ರತಿವಾದಿ ನಿಶಾನೆ ಪಿ-1 ಕ್ಕೆ ಎರಡು ಕಡೆ ಸಹಿ ಮಾಡಿರುತ್ತಾರೆ.

ನಿಶಾನ ಪಿ-1 ರಲ್ಲಿರುವ ಸಹಿ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ, ನಿಶಾನೆ ಪಿ-1 ನ್ನು ನಂಜುಂಡಸ್ವಾಮಿ ಬರೆದಿರುತ್ತಾರೆ. ನಾನು ಮತ್ತು ವಾದಿಯ ಗಂಡ ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. ವಾದಿಯ ಗಂಡ ನನ್ನ ಅಣ್ಣ ಎಂದರೆ ಸರಿ. ಆದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಸಮಕ್ಷಮ ಪ್ರತಿವಾದಿ ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ ನಿಶಾನೆ ಪಿ-1 ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ,

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

*(ಎಸ್.ಚಿನ್ನಸ್ವಾಮಿ)*

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಚನ್ನರಾಯಪಟ್ಟಣ**